OS-112/2022 ಪಿ.ಡಬ್ಲ್ಯೂ-2 (ಸಿದ್ದಯ್ಯ)

ದಿನಾಂಕಃ **23.04.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : 1 ನೇ ಪ್ರತಿವಾದಿ ಪರ ಶ್ರೀ. ಬಿ.ಎನ್.ಜಿ. ವಕೀಲರಿಂದ :**

ನನ್ನ ತಂದೆಯ ಹೆಸರು ರಾಚಯ್ಯ. ಈ ಕೇಸಿನಲ್ಲಿ ವಾದಿ ಮತ್ತು ಪ್ರತಿವಾದಿಗಳು ಯಾರು ಎಂದು ಗೊತ್ತೇ ಎಂದರೆ ಸಾಕ್ಷಿಯು ನನಗೆ ಓದಲು, ಬರೆಯಲು ಬರುವುದಿಲ್ಲವೆಂದು ನುಡಿಯುತ್ತಾರೆ. ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನನ್ನು ಸಾಕ್ಷಿ ಹೇಳಬೇಕೆಂದು ನ್ಯಾಯಾಲಯಕ್ಕೆ ಮಹದೇವು ಕರೆದುಕೊಂಡು ಬಂದಿರುತ್ತಾರೆ. ದಾವೆಯ ಸರ್ವೆ ನಂಬರ್, ವಿಸ್ತೀರ್ಣ ಮತ್ತು ಸದರಿ ಆಸ್ತಿಯು ಯಾರ ಹೆಸರಿಗೆ ಇದೆ ಎಂದು ಗೊತ್ತಿಲ್ಲ, ಸಾಕ್ಷಿಯು ಮುಂದುವರೆದು ನಾನು ಅವರ ಮನೆಯಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದರಿಂದ ಮಹದೇವುರವರೇ ಉಳುಮೆ ಮಾಡುತ್ತಿದ್ದುದು ಗೊತ್ತಿದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಚೆಕ್ಕುಬಂದಿ ನನಗೆ ಗೊತ್ತಿಲ್ಲ.

**2.** ನನ್ನ ಮನೆಯ ನಂಬರ್ ಹೇಳಲಾಗುವುದಿಲ್ಲ. 1 ನೇ ಪ್ರತಿವಾದಿಯ ತಂದೆಯ ಹೆಸರು ಪಾಪಣ್ಣ ಎಂದು ಇರುತ್ತದೆ. ಮಾದೇಗೌಡ ಅಲಿಯಾಸ್ ಚಿಕ್ಕಪುಟ್ಟೇಗೌಡರವರಿಗೆ ಮೊದಲನೇ ಹೆಂಡತಿ ಸಿದ್ದಮ್ಮ, ಅವರ ಮರಣಾನಂತರ ದೇವಮ್ಮ ಎನ್ನುವವರನ್ನು ಮದುವೆ ಮಾಡಿಕೊಂಡಿದ್ದರು ಎಂದರೆ ಸರಿ. ದೇವಮ್ಮರವರು 1 ನೇ ಪ್ರತಿವಾದಿಯ ತಂದೆಯನ್ನು ದತ್ತು ತೆಗೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ವಾದಿಯು ಸ್ವಾಧೀನದಲ್ಲಿರುತ್ತಾರೆಂದು ಹೇಳಿರುವುದು ಸುಳ್ಳು, ನಾನು ಅವರ ಮನೆಯಲ್ಲಿ ಕೆಲಸ ಮಾಡಿಕೊಂಡಿರುವುದರಿಂದ ಮಹದೇವುರವರ ಮಾತು ಕೇಳಿ ಸ್ವಾಧೀನದಲ್ಲಿರುತ್ತಾರೆಂದು ಸುಳ್ಳು ಸಾಕ್ಷ್ಯ ಹೇಳಿದ್ದೇನೆ ಎಂದರೆ ಸರಿಯಲ್ಲ.

**2 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**ಅಪರ ಹಿರಿಯ ಸಿಜೆ, ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**